# ಸಂಧ್ಯಾವಂದನೆ

ಶೋ. ಪ. ರಾಮಾನುಜನ್

ಶಾಸ್ತ್ರೋಕ್ತವಾದ ನಿತ್ಯಕರ್ಮಾನುಷ್ಠಾನಗಳಲ್ಲಿ ಮೂರು ಬಗೆಯುಂಟು. ಅವು ನಿತ್ಯ, ನೈಮಿತ್ತಿಕ ಹಾಗೂ ಕಾಮ್ಯ. ನಿತ್ಯಕರ್ಮವೆಂದರೆ ನಿಯತವಾದ ಕಾಲದಲ್ಲಿ ಮಾಡಲ್ಪಡುವಂಥವು. ಉದಾಹರಣೆಗೆ ಸಂಧ್ಯಾವಂದನೆಯನ್ನು ಪ್ರತಿಸಂಧ್ಯಾ-ಕಾಲದಲ್ಲಿಯೂ ಮಾಡಬೇಕು. ಔಪಾಸನಾದಿಗಳನ್ನು ಸಾಯಂ-ಪ್ರಾತಃ ಮಾಡಬೇಕು. ದರ್ಶಾದಿ ತರ್ಪಣಗಳು ಅಮಾವಾಸ್ಯೆ ಮುಂತಾದ ನಿಯತಕಾಲದಲ್ಲಿ ಮಾಡುವಂಥವು. ಪ್ರತ್ಯಾಬ್ದಿಕಶ್ರಾದ್ಧಗಳನ್ನು ಆಯಾ ಮೃತ ತಿಥಿಗಳಲ್ಲಿ ಮಾಡಬೇಕು. ಅಧ್ಯಾಯ ಉಪಾಕರ್ಮವನ್ನು ಪ್ರತಿವರ್ಷ ಶ್ರಾವಣಪೌರ್ಣಮಿಯಲ್ಲಿ ಮಾಡಬೇಕು. ಜನ್ಮದಿನದಲ್ಲಿ ಮಾಡುವ ಆಯುಷ್ಯ-ಹೋಮಾದಿಗಳು ಆಯಾ ನಿಯತ ನಕ್ಷತ್ರಗಳಲ್ಲಿ ಮಾಡಬೇಕಾದವು. ಹೀಗೆ ನಿಯತವಾದ ತಿಥಿ, ನಕ್ಷತ್ರ ಮುಂತಾದ ವಿಹಿತವಾದ ಕಾಲದಲ್ಲಿ ಮಾಡಲ್ಪಡುವ ಕಾರ್ಯಗಳಿಗೆ (ನಿಯತಕಾಲೀನಗಳಿಗೆ) ನಿತ್ಯಕರ್ಮಗಳೆಂದು ಹೆಸರು. ಸಂಕ್ರಮಣಕಾಲಗಳಲ್ಲಿ (ಸೂರ್ಯ ೧೨ ರಾಶಿಗಳನ್ನೂ ಪ್ರವೇಶಿಸುವಾಗ) ಮಾಡುವ ತರ್ಪಣಗಳು, ಸೂರ್ಯ-ಚಂದ್ರ-ಗ್ರಹಣತರ್ಪಣಗಳು ಮುಂತಾದ ಕಾರ್ಯಗಳು ಒಂದೊಂದು ನಿಮಿತ್ತವನ್ನು (ಸೂರ್ಯನ ತತ್ತದ್ರಾಶಿಪ್ರವೇಶ, ಸೂರ್ಯಚಂದ್ರರ ರಾಹು-ಕೇತು-ಗ್ರಹಣ ಮುಂತಾದವನ್ನು) ಅವಲಂಬಿಸಿ ಮಾಡಲ್ಪಡುವುದರಿಂದ ಇವುಗಳಿಗೆ ನೈಮಿತ್ತಿಕವೆಂದು ಹೆಸರು. ಒಂದೊಂದು ವಿಶೇಷಫಲವನ್ನು ಅಪೇಕ್ಷಿಸಿ ಮಾಡುವಂತಹ ಯಾಗಾದಿಗಳು ವ್ರತನಿಯಮಗಳು, ಭೋಜನ, ಉತ್ಸವಾದಿ ಸಮಾರಂಭಗಳು ಇವೆಲ್ಲ ಕಾಮ್ಯಕರ್ಮಗಳು.

ಈ ಮೂರು ಬಗೆಯ ಕರ್ಮಗಳಲ್ಲಿ ನಿತ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ಅವಶ್ಯವಾಗಿ ಮಾಡಲೇಬೇಕು, ಹಾಗೂ ಮಾಡದೇ ಇದ್ದಲ್ಲಿ ಪ್ರಾಯಶ್ಚಿತ್ತಾದಿಗಳನ್ನು ಮಾಡಬೇಕು. ಕಾಮ್ಯಕರ್ಮಗಳನ್ನು ಮಾಡದಿದ್ದರೆ ದೋಷವಿಲ್ಲ ಎಂಬುದು ನಿಯಮ.

ಈ ರೀತಿಯ ನಿತ್ಯಕರ್ಮಾನಷ್ಠಾನಗಳಲ್ಲಿ ಪ್ರತಿನಿತ್ಯ ಮಾಡಬೇಕಾದ ಕಾರ್ಯಗಳಿಗೆ ಆಹ್ನಿಕಗಳೆಂದು ಹೆಸರು. ಒಂದು ದಿವಸವನ್ನು ಐದು ಕಾಲಗಳನ್ನಾಗಿ ವಿಂಗಡಿಸಲಾಗಿದೆ. ಅವು ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ ಮತ್ತು ಯೋಗ ಕಾಲಗಳು. ಅಭಿಗಮನ ಕಾಲದಲ್ಲಿ ನಿದ್ರಾವಿಸರ್ಜನ [ಬ್ರಾಹ್ಮಮಹೂರ್ತದಲ್ಲಿ (ಸುಮಾರು 4-1/2 ಘಂಟೆಗೆ) ಏಳುವುದು], ಮಲಮೂತ್ರೋತ್ಸರ್ಜನ, ಶೌಚ, ಆಚಮನ, ದಂತಧಾವನ (ಹಲ್ಲು ತಿಕ್ಕುವುದು), ಸ್ನಾನ, ಸಂಧ್ಯಾವಂದನ, ದೇವ-ಋಷಿ-ಪಿತೃತರ್ಪಣ, ಅಗ್ನಿಕಾರ್ಯ, ಬ್ರಹ್ಮಯಜ್ಞ ಮುಂತಾದ ಕಾರ್ಯಗಳೊಡನೆ ಭಗವಂತನ ಮಾನಸಿಕವಾದ ಆರಾಧನವನ್ನು ಮಾಡಬೇಕು. ಉಪಾದಾನ ಕಾಲದಲ್ಲಿ ಅಂದಂದಿನ ಕಾರ್ಯಗಳಿಗೆ ಬೇಕಾದ ಪತ್ರ, ಪುಷ್ಪ, ಫಲ ಮುಂತಾದ ಪೂಜಾದ್ರವ್ಯಗಳನ್ನೂ, ದರ್ಭ, ಸಮಿತ್ ಮುಂತಾದ ಹೋಮದ್ರವ್ಯಗಳನ್ನೂ ಸಂಗ್ರಹಿಸಬೇಕು. ಇಜ್ಯಾಕಾಲದಲ್ಲಿ ಮಾಧ್ಯಾಹ್ನಿಕಸ್ನಾನ, ಮಾಧ್ಯಾಹ್ನಿಕ ಸಂಧ್ಯಾವಂದನ, ದೇವತಾರಾಧನ, ವೈಶ್ವದೇವ, ಅತಿಥಿಸತ್ಕಾರ, ಭೋಜನ ಮುಂತಾದ ಕಾರ್ಯಗಳನ್ನು ಮಾಡಬೇಕು. ಸ್ವಾಧ್ಯಾಯ ಕಾಲದಲ್ಲಿ ಮಂತ್ರ, ಜಪ, ಶಾಸ್ತ್ರ, ಅಧ್ಯಯನ, ಅಧ್ಯಾಪನ, ಅಭ್ಯಾಸಗಳನ್ನು ಮಾಡಬೇಕು. ಸಾಯಂ ಸಂಧ್ಯಾವಂದನ, ಅಗ್ನಿಕಾರ್ಯ, ರಾತ್ರಿಭೋಜನ, ಶಯನ ಇತ್ಯಾದಿ ಕಾರ್ಯಗಳನ್ನು ಐದನೇಯ ಯೋಗ ಕಾಲದದಲ್ಲಿ ಮಾಡಬೇಕು. ಹೀಗೆ ಪಾಂಚಕಾಲಿಕವಾದ ನಿತ್ಯಕರ್ಮಾನುಷ್ಠಾನವು ವೇದೋಕ್ತವಾಗಿ ಅವಶ್ಯಕರ್ತವ್ಯವಾಗಿದೆ. ಇದನ್ನೇ ಅಭಿಯುಕ್ತರು, 'ಅಭಿಗಚ್ಛನ್ ಹರಿಂ ಪ್ರಾತಃ ಪಶ್ಚಾದ್ದ್ರವ್ಯಾಣಿ ಚಾರ್ಜಯನ್ । ಅರ್ಚಯಂಶ್ಚ ತತೋ ದೇವಂ ತತೋ ಮಂತ್ರಾನ್ ಜಪನ್ನಪಿ ॥ ಧ್ಯಾಯನ್ನಪಿ ಪರಂ ದೇವಂ ಕಾಲೇಷೂಕ್ತೇಷು ಪಂಚಸು ।' ಎಂದು ತಿಳಿಸಿದ್ದಾರೆ. ಈ ಕಾರ್ಯಗಳನ್ನೆಲ್ಲ ಗುರುಮುಖವಾಗಿ ಕಲಿತು ಅನುಷ್ಠಿಸಬೇಕಾಗಿರುವುದರಿಂದ ಕೆಲವು ಮುಖ್ಯ ಅಂಶಗಳ ವಿಷಯವನ್ನು ಮಾತ್ರ ಈ ಲೇಖನಾವಳಿಯಲ್ಲಿ ವಿವರಿಸಲಾಗುವುದು.

ಪ್ರಾತಃಕಾರ್ಯಗಳಲ್ಲಿ ಸ್ನಾನಾನಂತರ ಮಾಡುವ ಸಂಧ್ಯಾವಂದನದಿಂದಲೇ ಇತರ ಯಾವ ಕಾರ್ಯವನ್ನು ಮಾಡುವುದಕ್ಕೂ ಅರ್ಹತೆ ಉಂಟಾಗುತ್ತದೆ. ಈ ರೀತಿಯಾಗಿ ಆಯಾ ಸಂಧ್ಯಾಕಾಲಗಳಲ್ಲಿ ಸಂಧ್ಯಾವಂದನವನ್ನು ಮಾಡದ ಹೊರತು ಇತರ ಯಾವ ಕಾರ್ಯಾಚರಣೆಗೆ ಅರ್ಹತೆ ಇರುವುದಿಲ್ಲ ಹಾಗೂ ಸಂಧ್ಯಾವಂದನೆ ಮಾಡದೇ ಮಾಡಿದ ಬೇರೆ ಯಾವ ಕಾರ್ಯವೂ ನಿಷ್ಫಲ ಎಂಬುದು 'ಸಂಧ್ಯಾಹೀನೋಽಶುಚಿರ್ನಿತ್ಯಂ ಅನರ್ಹಃ ಸರ್ವಕರ್ಮಸು । ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥' ಎಂಬ ಪ್ರಮಾಣದಿಂದ ಸುಲಭವೇದ್ಯ. ಆದ್ದರಿಂದ ಈ ಸಂಧ್ಯಾವಂದನದ ವಿಷಯವಾಗಿ ವೇದೋಕ್ತವಾದ ಅಂಶಗಳನ್ನು ಈ ಲೇಖನದಲ್ಲಿ ವಿವರಿಸುತ್ತೇವೆ.

ಪೂರ್ವಕಾಲದಲ್ಲಿ ಕೆಲವು ರಾಕ್ಷಸರು ಬ್ರಹ್ಮನನ್ನು ಕುರಿತು ಉಗ್ರವಾದ ತಪಸ್ಸನ್ನು ಆಚರಿಸಿದರು. ಆ ತಪಸ್ಸಿನಿಂದ ಪ್ರೀತನಾದ ಬ್ರಹ್ಮದೇವನು ಅವರಿಗೆ ಪ್ರತ್ಯಕ್ಷನಾಗಿ ಅವರು ಕೋರುವ ವರವನ್ನು ಕೊಡುವನೆಂದನು. ಆ ರಾಕ್ಷಸರು ಸೂರ್ಯನೊಡನೆ ಯುದ್ಧಮಾಡಬೇಕೆಂದು ವರ ಕೇಳಿದರು. ಬ್ರಹ್ಮನೂ ಸಹ ಸೂರ್ಯನೊಡನೆ ಯುದ್ಧ ಮಾಡಿರೆಂದು ಹೇಳಿ ಹೊರಟುಹೋದನು. ಆ ರಾಕ್ಷಸರು ಈ ವರಬಲದಿಂದ ಸೂರ್ಯನನ್ನು ಉದಯ ಮತ್ತು ಅಸ್ತಮಾನ ಕಾಲದಲ್ಲಿ ಎದುರಿಸಿ ಯುದ್ಧಮಾಡುತ್ತಾರೆ. ಈ ರಾಕ್ಷಸರನ್ನು ಗಾಯತ್ರಿ ಮಂತ್ರದಿಂದ ಅಭಿಮಂತ್ರಣವಾದ ನೀರಿನಿಂದಲೇ ಶಮನ ಮಾಡಲು ಸಾಧ್ಯ. ಆದ್ದರಿಂದಲೇ ವೇದವಿತ್ತುಗಳಾದ ಬ್ರಾಹ್ಮಣರು ಪೂರ್ವಾಭಿಮುಖವಾಗಿ ಸಂಧ್ಯಾಕಾಲದಲ್ಲಿ ಗಾಯತ್ರಿ ಮಂತ್ರದಿಂದ ಅಭಿಮಂತ್ರಿತವಾದ ನೀರನ್ನು ಮೇಲೆ ಬಿಡುತ್ತಾರೆ. ಈ ರೀತಿ ಮಾಡಿ ಪ್ರದಕ್ಷಿಣ ಮಾಡುವುರಿಂದ ಪಾಪವನ್ನು ಕಳೆದುಕೊಳ್ಳುತ್ತಾರೆ. ಈ ನೀರು ವಜ್ರಾಯುಧವಾಗಿ ಪರಿಣಮಿಸಿ ಆ ರಾಕ್ಷಸರನ್ನು ಮಂದೇಹಾರುಣ ದ್ವೀಪದಲ್ಲಿ ಎಸೆಯುತ್ತದೆ. ಹೀಗೆ ತಿಳಿದು ಉದಯಾಸ್ತಮಾನ ಕಾಲಗಳಲ್ಲಿ ಸೂರ್ಯನನ್ನು ಧ್ಯಾನಿಸಿಕೊಂಡು ಈ ಕಾರ್ಯವನ್ನು ಮಾಡುವ ವಿದ್ವಾಂಸನಾದ ಬ್ರಾಹ್ಮಣನು ಎಲ್ಲ ಶ್ರೇಯಸ್ಸನ್ನೂ ಹೊಂದುತ್ತಾನೆ, ಮತ್ತು 'ಅಸಾವಾದಿತ್ಯೋ ಬ್ರಹ್ಮ' ಎಂದಿರುವುದರಿಂದ ಬ್ರಹ್ಮಪ್ರಾಪ್ತಿಯನ್ನೂ ಪಡೆಯುತ್ತಾನೆ. ಈ ವೇದೋಕ್ತವಾದ ವೃತ್ತಾಂತವೇ ಸಂಧ್ಯಾವಂದನ ಅನುಷ್ಠಾನದ ಹಾಗೂ ಅದರ ಮಾಹಾತ್ಮ್ಯದ ಹಿನ್ನೆಲೆ.

(ಸೂರ್ಯನು 'ಸರ್ವಸ್ಯ ವಾ ಅಹಂ ಮಿತ್ರಮಸ್ಮಿ ....' ಎಂಬ ವೇದವಾಕ್ಯದ ರೀತ್ಯಾ ಎಲ್ಲರಿಗೂ ಮಿತ್ರನೆನಿಸಿಕೊಂಡಿರು-ವುದರಿಂದಲೂ ಹಾಗೂ 'ಯಥಾಶಕ್ತಿ ನಿಗೃಹ್ಣೀಯಾದ್ದೇವತಾಗುರುನಿಂದಕಾನ್' ಎಂದು ದೇವರನ್ನೂ ಗುರುವನ್ನೂ ನಿಂದಿಸುವವರನ್ನು ಶಕ್ತಿಗೆ ತಕ್ಕಂತೆ ಶಿಕ್ಷಿಸಬೇಕೆಂಬ ಪ್ರಮಾಣಾನುಗುಣವಾಗಿ ಬ್ರಾಹ್ಮಣೋತ್ತಮರು ಪೂಜ್ಯದೇವತೆಯಾದ ಸೂರ್ಯನೊಡನೆ ಯುದ್ಧ ಮಾಡುವ ರಾಕ್ಷಸರನ್ನು ನಿರಸನ ಮಾಡಲು ಅರ್ಘ್ಯಪ್ರದಾನ ಮಾಡುತ್ತಾರೆ ಮತ್ತು 'ಅಸಾವಾದಿತ್ಯೋ ಬ್ರಹ್ಮ' ಎಂದು ಪ್ರದಕ್ಷಿಣೆ ಮಾಡುವುದರಿಂದ ಈ ಪಾಪವನ್ನೂ ಕಳೆದುಕೊಳ್ಳುತ್ತಾರೆ). ಈ ವಿವರಗ-ಳೆಲ್ಲವೂ ('ರಕ್ಷಾಗ್ಂಸಿ ಹ ವಾ ಪುರೋಽನುವಾಕೇ ತಪೋಗ್ರಮತಿಷ್ಠನ್ತ .... ತದು ಹ ವಾ ಏತೇ ಬ್ರಹ್ಮವಾದಿನಃ ಪೂರ್ವಾಭಿಮುಖಾಃ ಸಂಧ್ಯಾಯಾಂ ಗಾಯತ್ರಿಯಾಭಿಮಂತ್ರಿತಾ ಆಪ ಊರ್ಧ್ವಂ ವಿಕ್ಷಿಪಂತಿ .... ಉದ್ಯಂತಮಸ್ತಂಯಂತಮಾದಿತ್ಯಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾನ್ ಸಕಲಂ ಭದ್ರಮಶ್ನುತೇಽಸಾ-ವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ಬ್ರಹ್ಮಾಪ್ಯೇತಿ ಯ ಏವಂ ವೇದ' ಎಂಬ ವೇದಭಾಗದಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ಸಂಧ್ಯಾಶಬ್ದವು ಸಂಧಿಕಾಲವನ್ನು ಸೂಚಿಸುತ್ತದೆ. ಹಗಲು ರಾತ್ರಿಗಳ ಸಂಧಿಕಾಲ (ಹಾಗೂ ಪೂರ್ವಾಹ್ನ, ಅಪರಾಹ್ಣಗಳ ಸಂಧಿಕಾಲ) ಸಂಧ್ಯಾಕಾಲವಾಗುತ್ತದೆ. (ಸೂರ್ಯನಿದ್ದರೆ ಹಗಲು, ನಕ್ಷತ್ರಗಳು ದೃಷ್ಟಿಗೋಚರವಾದರೆ ರಾತ್ರಿ ಎಂದು ತಿಳಿಯಬೇಕು). ಈ ಕಾಲದಲ್ಲಿ ಸೂರ್ಯನ ವಂದನೆ ಮಾಡುವುದರಿಂದ 'ಸಂಧ್ಯಾವಂದನೆ' ಎಂಬ ಹೆಸರು ಬಂದಿದೆ. ಪ್ರಾತಃ ಸಂಧ್ಯಾವಂದನವನ್ನು ನಕ್ಷತ್ರಗಳು ಕಾಣುತ್ತಿರುವಾಗಲೇ ಮಾಡುವುದು ಉತ್ತಮಕಾಲ, ನಕ್ಷತ್ರಗಳು ಮರೆಯಾಗಿದ್ದು ಸೂರ್ಯ ಉದಯಿಸುವ ಮುಂಚೆ ಮಧ್ಯಮಕಾಲ, ಸೂರ್ಯೋದಯಾನಂತರ ಮಾಡುವುದೇ ಅಧಮ. ಹೀಗೆ ಮಾಧ್ಯಾಹ್ನಿಕವನ್ನು ಸೂರ್ಯ ನೆತ್ತಿಗೆ ಮೇಲಿದ್ದಾಗ ಮಾಡಬೇಕು. ಸಾಯಂ ಸಂಧ್ಯಾವಂದನವನ್ನು ಸೂರ್ಯನಿರುವಾಗಲೇ ಮಾಡುವುದು ಉತ್ತಮ. ಸೂರ್ಯ ಮುಳುಗಿದ್ದು ನಕ್ಷತ್ರಗಳು ಕಾಣುವುದಕ್ಕೆ ಮುಂಚೆ ಮಧ್ಯಮ ಹಾಗೂ ನಕ್ಷತ್ರಗಳು ಕಾಣುವಾಗ ಮಾಡುವುದು ಅಧಮ. (ಇಲ್ಲಿ ಸಂಧ್ಯಾವಂದನದಲ್ಲಿ ಗಾಯತ್ರಿಯಿಂದ ಅಭಿಮಂತ್ರಣಗೊಂಡ ನೀರನ್ನು ಬಿಡುವುದೆಂಬ ಅರ್ಘ್ಯಪ್ರದಾನಕ್ಕೇ ಈ ಕಾಲಗಳು). ಈ ಸಂಧ್ಯಾವಂದನವನ್ನು ಅನುಷ್ಠಿಸುವ ವಿಧಾನ ಹಾಗೂ ಸಂಧ್ಯಾವಂದನ ಮಂತ್ರಗಳ ಅರ್ಥವನ್ನು ಗುರುಮುಖವಾಗಿ ಕಲಿಯಬೇಕು. ಈ ಲೇಖನದಲ್ಲಿ ಸಂಧ್ಯಾವಂದನದಲ್ಲಿನ ಸ್ಥೂಲವಾದ ಅಂಶಗಳ ಪರಿಚಯ ಮಾತ್ರ ಮಾಡಿ ಕೊಡಲಾಗುವುದು.

ಕೈಕಾಲುಗಳನ್ನು ತೊಳೆದುಕೊಂಡು, ಆಚಮನ, ಪ್ರಾಣಾಯಾಮದೊಡನೆ ಸಂಕಲ್ಪ (ಸಾತ್ತ್ವಿಕತ್ಯಾಗ ಸಹಿತ) ಮಾಡಿಕೊಂಡು, ಪ್ರೋಕ್ಷಣ, ಪ್ರಾಶನ (ಮಂತ್ರಪೂರ್ವಕವಾಗಿ ಅಂಗೈಯಲ್ಲಿನ ನೀರನ್ನು ಕುಡಿಯುವುದು) ಮತ್ತು ಪುನಃ ಪ್ರೋಕ್ಷಣಗಳನ್ನು ಪೂರ್ವಾಂಗವಾಗಿ ಮಾಡಬೇಕು. ಇಲ್ಲಿನ ಪ್ರೋಕ್ಷಣಾದಿಗಳು ಋಷಿ, ಛಂದಸ್, ದೇವತೆ, ವಿನಿಯೋಗದೊಡನೆ ಮಂತ್ರವತ್ತಾಗಿ ಮಾಡಲ್ಪಡುವುದಾದ್ದರಿಂದ ದೇಹೇಂದ್ರಿಯಗಳ ಅಂತರ್ಬಹಿಃಶುದ್ಧಿಯನ್ನು ಕೊಡುತ್ತವೆ ಹಾಗೂ ಪ್ರಧಾನವಾದ ಅರ್ಘ್ಯ-ಪ್ರದಾನಕ್ಕೆ ಅರ್ಹತೆಯನ್ನು ಉಂಟುಮಾಡುತ್ತವೆ. ನಂತರ ಕೆಳಗೆ ಹೇಳಿದ ರೀತಿಯಲ್ಲಿ ಗಾಯತ್ರಿಯಿಂದ ಅಭಿಮಂತ್ರಣ ಮಾಡಿ ನೀರನ್ನು (ಅರ್ಘ್ಯಪ್ರದಾನಕ್ಕೆ) ಬಿಡಬೇಕು. ಇದು ಸಕಾಲದಲ್ಲಿ ಸಂಧ್ಯಾವಂದನ ಮಾಡಿದರೆ ಮೂರು ಬಾರಿಯೂ, ಕಾಲ ಅತಿಕ್ರಮಿಸಿದಲ್ಲಿ (ಮೀರಿದ್ದಲ್ಲಿ) ಪ್ರಾಯಶ್ಚಿತ್ತಾರ್ಥವಾಗಿ ಒಂದೂ ಸೇರಿ ನಾಲ್ಕು ಬಾರಿಯೂ ಮಾಡಬೇಕು. ಅರ್ಘ್ಯ-ಪ್ರದಾನವನ್ನು ನಿಂತುಕೊಂಡು, ಎರಡೂ ಅಂಗೈಗಳಲ್ಲೂ ನೀರನ್ನು ತುಂಬಿಕೊಂಡು, ಮಂತ್ರವನ್ನು ಜಪಿಸಿ, ಊರ್ಧ್ವಮುಖವಾಗಿ ಬಿಡ ಬೇಕು. ನಂತರ ಒಮ್ಮೆ ಆತ್ಮಪ್ರದಕ್ಷಿಣೆ ಮಾಡಿ ಕೇಶವಾದಿತರ್ಪಣಗಳನ್ನು ಮಾಡಬೇಕು.

ಅನಂತರ ಗಾಯತ್ರೀ ಮಂತ್ರ ಜಪವನ್ನು (ಶ್ರೀಮದಷ್ಟಾಕ್ಷರ ಜಪವನ್ನೂ ಸಹ) ಮಾಡಿ ಆಚಮನದೊಡನೆ ಸಂಧ್ಯಾವಂದನ-ವನ್ನು ಮುಗಿಸಬೇಕು. (ಗಾಯತ್ರೀ ಜಪಕ್ಕೆ ಮುನ್ನ ೧೦ ಪ್ರಾಣಾಯಾಮಗಳನ್ನು ಮಾಡಿ ೧೦ ಆವರ್ತಿ ಪ್ರಾಣಾಯಾಮ ಮಂತ್ರವನ್ನು ಜಪಿಸಬೇಕು.) ಗಾಯತ್ರೀ ಜಪಕ್ಕಾಗಿ ಸಂಕಲ್ಪಿಸಿಕೊಂಡು ಗಾಯತ್ರೀ ಆವಾಹನವನ್ನು ಮಾಡಬೇಕು. ಗಾಯತ್ರೀ ಸ್ವರೂಪವನ್ನು ಪ್ರಾತಃಕಾಲದಲ್ಲಿ ಸೂರ್ಯಮಂಡಲಮಧ್ಯದಲ್ಲಿ ಕೆಂಪು ಬಣ್ಣದ ಕುಮಾರಿಯಾಗಿ, ಹಂಸವಾಹನದಲ್ಲಿದ್ದು ಅಕ್ಷಮಾಲಿಕೆಯನ್ನು ಧರಿಸಿ, ಬ್ರಹ್ಮಸ್ವರೂಪಳಾಗಿ ಋಗ್ವೇದವನ್ನು ಉಚ್ಚರಿಸುತ್ತಿರುವ ಹಾಗೆಯೂ, ಮಧ್ಯಾಹ್ನದಲ್ಲಿ ಸೂರ್ಯಮಂಡಲ ಮಧ್ಯದಲ್ಲಿ ಯಜುರ್ವೇದವನ್ನು ಹೇಳುತ್ತಾ ಬಿಳಿ ಯುವತಿಯಾಗಿ ಶೂಲವನ್ನು ಧರಿಸಿ, ವೃಷಭವಾಹನದಲ್ಲಿ ರುದ್ರದೇವತಾಂಶಳಾಗಿಯೂ, ಸಾಯಂಕಾಲದಲ್ಲಿ ಸೂರ್ಯಮಂಡಲಮಧ್ಯದಲ್ಲಿ ಕರಿಯ ವೃದ್ಧ-ಸ್ತ್ರೀಯಾಗಿ ಚಕ್ರಾಯುಧವನ್ನು ಧರಿಸಿ ಗರುಡವಾಹನದಲ್ಲಿದ್ದು ವಿಷ್ಣುಸ್ವರೂಪಳಾಗಿ ಸಾಮವೇದವನ್ನು ಹೇಳುವ ಹಾಗೆಯೂ ಧ್ಯಾನಿಸಬೇಕು. ಮೂರು ಕಾಲಗಳಲ್ಲಿಯೂ ಪರಮಾತ್ಮನಾದ ಶ್ರೀಮನ್ನಾರಾಯಣನೇ ಆದಿತ್ಯಮಂಡಲ-ವರ್ತಿಯಾಗಿ ಈ ಮೂರು ರೂಪಗಳಲ್ಲಿ ಧ್ಯಾನವಿಷಯನಾಗಿದ್ದಾನೆ ಎಂದು ತಿಳಿಯಬೇಕು. ಜಪವಾದ ಮೇಲೆ (ಅಷ್ಟಾಕ್ಷರ ಜಪವೂ ಆದ ನಂತರ) ಗಾಯತ್ರೀ ಉದ್ವಾಸನವನ್ನೂ ಸೂರ್ಯನ ಉಪಸ್ಥಾನವನ್ನೂ ಹಾಗೂ ದಿಙ್ನಮಸ್ಕಾರಗಳನ್ನೂ ಮಾಡಿ ಆಚಮನದೊಡನೆ ಸಂಧ್ಯಾವಂದನವನ್ನೂ ಸಮಾಪನ ಮಾಡಬೇಕು.

ಈ ಗಾಯತ್ರೀ ಮಂತ್ರವೇ ಬ್ರಹ್ಮೋಪದೇಶವಾಗಿರುವುದರಿಂದಲೂ, ಈ ಮಂತ್ರದಿಂದಲೇ ಅರ್ಘ್ಯಪ್ರಧಾನವನ್ನು ಮಾಡುವುದರಿಂದಲೂ ಹಾಗೆಯೇ ಈ ಮಂತ್ರವನ್ನೇ ಮೂರು ಕಾಲಗಳಲ್ಲಿಯೂ (೧೦೦೮, ೧೦೮, ಅಥವಾ ಕನಿಷ್ಠಪಕ್ಷ ೨೮ ಆವರ್ತಿ) ಜಪ ಮಾಡಬೇಕಾಗಿ ವಿಧಿಸಿರುವುದರಿಂದಲೂ ಈ ಮಂತ್ರದ ಮಾಹಾತ್ಮ್ಯವನ್ನು ತಿಳಿಯುವುದು ಆವಶ್ಯಕವಾಗಿದೆ. ತದ್ವಿಷಯಕವಾದ ವೇದೋಕ್ತವೃತ್ತಾಂತದ ಮೂಲಕ ಅದನ್ನು ಇನ್ನು ನೋಡೋಣ.

ಒಂದು ಸಲ ದೇವಾಸುರಯುದ್ಧ ನಡೆದಾಗ ಗಾಯತ್ರೀ ದೇವತೆಯು (ಸವಿತೃಶಬ್ದವಾಚ್ಯನಾದ ಶ್ರೀಮನ್ನಾರಾಯಣನು) ಆ ದೇವಾಸುರರ ಶಕ್ತಿ, ಸಾಮರ್ಥ್ಯ, ಐಶ್ವರ್ಯಗಳನ್ನೆಲ್ಲ ತೆಗೆದುಕೊಂಡು ಹೊರಟು ಹೋಗಲು (ಅಂದರೆ ದೇವಾಸುರರು ಈ ದೇವತೆಯ ಪ್ರಭಾವದಿಂದ ನಿಶ್ಶಕ್ತರಾಗಿ, ನಿರ್ವೀರ್ಯರಾಗಿ ಮಾಡಲ್ಪಟ್ಟರು.) ಆ ದೇವಾಸುರರು ಈ ದೇವತೆಯು ನಮ್ಮ ಎರಡು ಗೋಷ್ಠಿಯಲ್ಲಿ ಯಾರಿಗೆ ಪ್ರಸನ್ನಳಾಗುವಳೋ ಅವರೇ ಬಲಿಷ್ಠರಾಗಿ ಜಯಶೀಲರಾಗುತ್ತಾರೆಂದು ಭಾವಿಸಿ ಆ ದೇವತೆಯನ್ನು ಆಹ್ವಾನಿಸಿ ಪೂಜಿಸ ತೊಡಗಿದರು. ಆ ದೇವತೆ ಯಾರಿಗೂ ಒಲಿಯದಿದ್ದನ್ನು ಕಂಡು ದೇವತೆಗಳು 'ಓಜೋಸಿ....' ಎಂಬ ಯಜುಸ್ಸಿನಿಂದ ಸ್ತೋತ್ರ ಮಾಡಿದಾಗ ಆಕೆ ದೇವತೆಗಳಿಗೆ ಪ್ರಸನ್ನಳಾಗಿ ಅವರನ್ನು ಅನುಗ್ರಹಿಸಿ ಜಯಶೀಲರಾಗುವಂತೆ ಮಾಡಿದಳು. ಈ ಮಂತ್ರದಿಂದಲೇ ಸಂಧ್ಯಾವಂದನದಲ್ಲಿ ಗಾಯತ್ರೀ ಆವಾಹನ ಮಾಡಲಾಗುತ್ತದೆ. ಸಕಲ ಶ್ರೇಯಸ್ಸನ್ನು ಕೊಡುವ, ಎಂದೂ ಕ್ಷಯವಿಲ್ಲದ, ಬ್ರಹ್ಮಕ್ಕೆ ಸಮಾನವಾದ, ವೇದಕ್ಕೆಲ್ಲ (ಛಂದಸ್ಸುಗಳಿಗೆಲ್ಲ) ತಾಯಿಯಂತಿರುವ ಗಾಯತ್ರೀದೇವಿಯನ್ನು ಈ ಮಂತ್ರ ಸ್ತೋತ್ರ ಮಾಡುತ್ತದೆ. ಗಾಯತ್ರಿಯು ದೇಹಬಲ, ಶಕ್ತಿ, ಸಾಮರ್ಥ್ಯ, ಇಂದ್ರಿಯಶಕ್ತಿ, ತೇಜಸ್ಸು, ದೇವತೆಗಳ ಸ್ಥಾನ, ಕೀರ್ತಿ ದೀರ್ಘಾಯುಸ್ಸು, ಮತ್ತೆ ಈ ರೀತಿ ಎಲ್ಲ ಬಗೆಯ ಐಶ್ವರ್ಯ-ಗಳನ್ನು ಕೊಟ್ಟು, ದುಷ್ಟಶಕ್ತಿಗಳನ್ನು ನಾಶಮಾಡುವ ಪ್ರಭಾವ ಉಳ್ಳವಳೆಂದು ಈ ಮಂತ್ರದ ತಾತ್ಪರ್ಯ.

ವೇದದಲ್ಲಿ ಮತ್ತೊಂದು ಕಡೆಯೂ ಗಾಯತ್ರೀಮಹಿಮೆ ಹೇಳಲಾಗಿದೆ. ಅದು ಹೀಗಿದೆ - ಕದ್ರೂ ಮತ್ತು ಸುಪರ್ಣೀ ಎಂಬ ಇಬ್ಬರು ದೇವಸ್ತ್ರೀಯರು ತಮ್ಮಲ್ಲಿ ಯಾರು ಹೆಚ್ಚು ರೂಪವತಿಯೆಂಬ ಬಗ್ಗೆ ಒಮ್ಮೆ ಸ್ಪರ್ಧಿಸಿದರು. ಆ ಸ್ಪರ್ಧೆಯ ನಿಯಮದಂತೆ ಸೋತವರು ಗೆದ್ದವರು ಹೇಳಿದ್ದನ್ನು ಮಾಡಬೇಕಿತ್ತು. ಆ ಪಂದ್ಯದಲ್ಲಿ ಕದ್ರೂ ಸುಪರ್ಣಿಯನ್ನು ಜಯಿಸಿದಳು. ಆಗ ಕದ್ರೂ ಸುಪರ್ಣಿಯನ್ನು ಕುರಿತು ಸ್ವರ್ಗಲೋಕದಲ್ಲಿರುವ ಸೋಮರಸವನ್ನು ತಂದುಕೊಡಬೇಕೆಂದು ಕೇಳಿದಳು. (ಅಮೃತವನ್ನು ತಂದು ಕೊಡಬೇಕೆಂದದ್ದಾಗಿಯೂ, ಒಂದೆಡೆ ಇದೆ). ಆಗ ಸುಪರ್ಣಿಯು ತನ್ನ ಮಕ್ಕಳಾದ ಛಂದಸ್ಸುಗಳನ್ನು (ಜಗತೀ, ತ್ರಿಷ್ಟುಪ್ ಮತ್ತು ಗಾಯತ್ರೀ ಎಂದು ಮೂರು ಛಂದಸ್ಸುಗಳು ಸುಪರ್ಣಿಯ ಮಕ್ಕಳು. ಅವು ಕ್ರಮವಾಗಿ ಪಾದಕ್ಕೆ ೧೪, ೧೩ ಮತ್ತು ೪ ಅಕ್ಷರಗಳನ್ನುಳ್ಳವು) ಕುರಿತು ಈ ಪಂದ್ಯದ ವಿವರಗಳನ್ನು ಹೇಳಿ ಅವುಗಳನ್ನು ಆ ಸೋಮರಸವನ್ನು ಸ್ವರ್ಗದಿಂದ ತಂದುಕೊಟ್ಟು ಕದ್ರೂವಿನ ಆದೇಶವನ್ನು ನೆರವೇರಿಸ ಬೇಕೆಂದೂ ಹೇಳಿದಳು. ಆಗ ಮೊದಲನೆಯದಾಗಿ (ಒಂದು ಪಾದಕ್ಕೆ) ೧೪ ಅಕ್ಷರಗಳನ್ನುಳ್ಳ ಜಗತೀ ಛಂದಸ್ಸು ಸ್ವರ್ಗಕ್ಕೆ ಹೋಗಿ ಸೋಮವನ್ನು ತರಲಾರದೇ ತನ್ನ ಎರಡು ಅಕ್ಷರಗಳನ್ನೂ ಸಹ ಕಳೆದುಕೊಂಡು ೧೨ ಅಕ್ಷರಗಳುಳ್ಳದ್ದಾಗಿ ಹಿಂದಿರುಗಿತು. ತ್ರಿಷ್ಟುಪ್ ಛಂದಸ್ಸೂ ಇದೇ ರೀತಿ ಸೋಮವನ್ನು ತರಲಾರದೇ ಎರಡು ಅಕ್ಷರಗಳನ್ನೂ ಸಹ ಕಳೆದುಕೊಂಡು ೧೧ ಅಕ್ಷರಗಳುಳ್ಳದ್ದಾಗಿ ಹಿಂದಿರುಗಿತು. ಆಗ ಕಿರಿಯದಾದ ೪ ಅಕ್ಷರಗಳನ್ನುಳ್ಳ ಗಾಯತ್ರೀ ಛಂದಸ್ಸು ತನ್ನ ತೇಜಸ್ಸಿನಿಂದ ಸೋಮರಸವನ್ನು ತಂದಿದ್ದಲ್ಲದೆ ೪ ಅಕ್ಷರಗಳನ್ನೂ (ಉಳಿದ ಎರಡು ಛಂದಸ್ಸುಗಳು ಕಳೆದುಕೊಂಡಿದ್ದ ಎರಡೆರಡು ಅಕ್ಷರಗಳನ್ನೂ) ಸಂಪಾದಿಸಿಕೊಂಡು ಬಂದಿತು ಮತ್ತು ಅದು ಅಷ್ಟಾಕ್ಷರ (೮ ಅಕ್ಷರಗಳನ್ನುಳ್ಳದ್ದು) ಆಯಿತು. ಹೇಗೆ ಸೋಮರಸವನ್ನು

ತಂದಿದ್ದರಿಂದಲೂ ಅತಿ ತೇಜಸ್ವಿಯಾದ್ದರಿಂದಲೂ ಗಾಯತ್ರಿಗೆ ಅಗ್ರಮಾನ್ಯತೆ ಕೊಡಲಾಗಿದೆ. ಬ್ರಹ್ಮವರ್ಚಸ್ಸಿಗೆ ಕಾರಣವಾದುದು ಸೋಮರಸ ಎಂಬುದು 'ಬ್ರಹ್ಮಣೋ ವಾ ಏತತ್ತೇಜಃ । ಯತ್ಸೋಮಃ ।' ಎಂಬ ವೇದವಾಕ್ಯದಿಂದ ಸ್ಪಷ್ಟವಾಗುತ್ತದೆ. ಸೋಮಪಾನ ಮಾಡದವರು (ಸೋಮಯಾಗದಲ್ಲಿ ವಿಧ್ಯುಕ್ತವಾಗಿ ಸೋಮಲತೆಯೆಂಬ ಬಳ್ಳಿಯ ರಸವನ್ನು ತೆಗೆದುಕೊಳ್ಳದವರು) ದುರ್ಬ್ರಾಹ್ಮಣರೆಂದು ವೇದ ಹೇಳುತ್ತದೆ. ಇಂತಹ ಬ್ರಾಹ್ಮಣ್ಯವನ್ನೂ ತೇಜಸ್ಸನ್ನೂ ಉಂಟುಮಾಡುವ ಸೋಮರಸವನ್ನೂ ತಂದು ಕೊಟ್ಟಿರುವುದರಿಂದ ಗಾಯತ್ರಿಗೆ ಕೆಳಗೆ ಹೇಳಿದ ಮಹಿಮೆ ಇದೆ ಮತ್ತು ಈ ಗಾಯತ್ರೀ ಉಪದೇಶದಿಂದ (ಬ್ರಹ್ಮೋಪದೇಶದಿಂದ) ಬ್ರಾಹ್ಮಣ್ಯ ಎನ್ನಲಾಗಿದೆ.

ಈ ರೀತಿ ವಿಶಿಷ್ಟವಾದ ಮಹಿಮೆಯುಳ್ಳ ಗಾಯತ್ರೀ ಮಂತ್ರದ ಸಾಮಾನ್ಯವಾದ ಅರ್ಥ ಈ ರೀತಿ ಇದೆ.

'ಸಕಲಜಗತ್ಕಾರಣನೂ ಚಿದಚಿತ್ತತ್ತ್ವಗಳನ್ನು ಶರೀರವಾಗಿ ಹೊಂದಿರುವ ಶ್ರೀಮನ್ನಾರಾಯಣನ ಅತ್ಯಂತ ಸ್ಪೃಹಣೀಯ-ವಾದ ತೇಜಸ್ಸನ್ನು ಧ್ಯಾನಿಸುವೆವು. ಆ ಭಗವಂತನು ನಮ್ಮ ಇಂದ್ರಿಯಾದಿಗಳನ್ನು ನಿರ್ಮಲವಾಗಿ ಮಾಡಿ ಅವನಲ್ಲಿಯೇ ಪ್ರವರ್ತಿಸುವಂತೆ ಪ್ರೇರೇಪಿಸಲಿ.'

ಆ ಭಗವಂತನು ಆದಿತ್ಯಸ್ವರೂಪನಾಗಿ ಸೂರ್ಯಮಂಡಲದಲ್ಲಿ ರಾರಾಜಿಸುತ್ತಿದ್ದಾನೆ. ('ಯ ಏಷ ಆದಿತ್ಯೇ ಪುರುಷಸ್ಸ ಪರಮೇಷ್ಠೀ ಬ್ರಹ್ಮಾತ್ಮಾ....') ಆತನ ಉಪಾಸನೆ ಮೂರುಕಾಲಗಳಲ್ಲಿಯೂ ವೇದೋಕ್ತಕರ್ತವ್ಯವಾಗಿದ್ದು ಸಕಲ ಶ್ರೇಯಸ್ಕರವಾಗಿದೆ ಎಂಬುದನ್ನು ಹೀಗೆ ವಿವರಿಸಿದೆವು. ಇದೇ ಸಂಧ್ಯಾವಂದನದ ಹಿರಿಮೆಯಾಗಿದೆ.